ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:34/2021

ಚಾಸಾ:7 ಪ್ರಾಸಾ:7

ದಿನಾಂಕ: 04.09.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪ್ರಸನ್ನ |
| ತಂದೆಯ ಹೆಸರು | : | |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಉಪ್ಪಿನಕುದ್ರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 13-08-2020 ರಂದು ಉಪ್ಪಿನಕುದ್ರುವಿನಲ್ಲಿ ಪೊಲೀಸರು ಕರೆದಾಗ ನಾನು ಮತ್ತು ಚಾಸಾ-8 ರವರು ಹಾಜರು ಇದ್ದು, ಪಂಚನಾಮೆಯನ್ನು 10 ರಿಂದ 11 ರವರೆಗೂ ಜರುಗಿಸಿ ಒಂದು ಬಟ್ಟೆಯನ್ನು ವಶಕ್ಕೆ ಪಡೆದಿರುತ್ತಾರೆ. ಆ ವೇಳೆಗೆ 2 ಪೋಟೋಗಳನ್ನು ತೆಗೆದಿರುತ್ತಾರೆ.

ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ಮತ್ತು 5ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಎಸ್ ರವರಿಂದ:**

ಚಾಸಾ-8 ನನ್ನ ಸ್ನೇಹಿತರು. ಚಾಸಾ-1 ಆತನ ಹೆಂಡತಿ. ಚಾಸಾ-2 ರಿಂದ 5 ರವರ ಪರಿಚಯವಿಲ್ಲ. ಚಾಸಾ-1 ಮತ್ತು ಆರೋಪಿತರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇರುವ ಬಗ್ಗೆ ನನಗೆ ತಿಳಿದಿಲ್ಲ. ಪ್ರಕರಣದ ಬಗ್ಗೆ ಠಾಣೆಗೆ ಭೇಟಿ ನೀಡಿಲ್ಲ. ನಾನು ಮೇಲೆ ಗುರುತಿಸಿದ ದಾಖಲೆಯನ್ನು ಯಾರು ಬರೆದಿದ್ದು ಎಂದು ನನಗೆ ತಿಳಿದಿಲ್ಲ. ದಾಖಲೆಯಲ್ಲಿ ಏನು ಬರೆದಿದೆ ಎಂದು ನಮಗೆ ತೋರಿಸಿಲ್ಲ. ಸದ್ರಿ ದಾಖಲೆಯಲ್ಲಿ ಬೇರೆ ಯಾರು ಸಹಿ ಮಾಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಸ್ಥಳಕ್ಕೆ ಹೋಗುವ ವೇಳೆಗೆ ಪೊಲೀಸರು ದಾಖಲೆ ಬರೆದು ತಂದಿದ್ದರು ಎಂದರೆ ಸರಿ. ಮುಮಾ1 ರಂತಹ ಟೀ ಶರ್ಟ್ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಅದು ಚಾಸಾ-3 ರವರಿಗೆ ಸೇರಿದ್ದು ಎಂದು ತೋರಿಸಲು

ಯಾವುದೇ ಚಹರೆ ಇಲ್ಲ ಎಂದರೆ ಸರಿ. ಪೊಲೀಸರು ವಶಕ್ಕೆ ಪಡೆದ ಬಟ್ಟೆ ಯಾವುದು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ. ನನ್ನ ಸ್ನೇಹಿತನಾದ ಚಾಸಾ-8 ರವರಿಗೆ ಸಹಾಯ ಮಾಡಲು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದ್ರಿ ದಾಖಲೆ ಎಷ್ಟು ಪುಟ ಇದೆ ಎಂದು ನನಗೆ ತಿಳಿದಿಲ್ಲ. ಪಿರ್ಯಾದುದಾರರು ನನ್ನ ಸ್ನೇಹಿತನ ಹೆಂಡತಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಮಾ1 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**